


‘ಇಲ್ಲಿ ತಲತಲಾಂತರಗಳಿಂದ ವಾಸ ಮಾಡುತ್ತಿರುವವರೂ ಸೇರಿ ಅನೇಕರಿಗೆ ಪ್ರಾಚೀನ ಮುಂಬಾದೇವಿ ದೇವಸ್ಥಾನದ ಬಗ್ಗೆ ತಿಳಿದೇ ಇಲ್ಲ. ಇಲ್ಲಿಯೇ ಹುಟ್ಟಿದ್ದರೂ, 60 ಹಾಗೂ 70 ವಯಸ್ಸು ದಾಟಿದ ಅನೇಕರು ಜೀವನದಲ್ಲಿ ಮೊದಲ ಬಾರಿಗೆ ಇಲ್ಲಿಗೆ ಬರುವುದನ್ನು ಕಂಡಿದ್ದೇನೆ’ ಎನ್ನುತ್ತಾರೆ ಮುಂಬಾದೇವಿ ದೇವಸ್ಥಾನದ ವ್ಯವಸ್ಥಾಪಕ ಹೇಮಂತ್ ಜಾಧವ್.

ದಶಕಗಳಿಂದ ಇಲ್ಲಿ ವಾಸ ಮಾಡುತ್ತಿರುವ, ಕರ್ನಾಟಕದವರಾದ ಕಮಾಂಡರ್ ಮಹಾಬಲ ಭಟ್ ಕೂಡ ನಾನು ಹೇಳುವವರೆಗೂ ಈ ದೇವಸ್ಥಾನದ ಹೆಸರನ್ನೇ ಕೇಳಿರಲಿಲ್ಲ.

‘ಮುಂಬೈನ ಅಧಿದೇವತೆ ಮುಂಬಾದೇವಿ ತನ್ನಲ್ಲಿಗೆ ಬರುವ ಎಲ್ಲರ ಕನಸೂ ನನಸಾಗುವಂತೆ ಮಾಡುತ್ತಾಳೆ’ ಎನ್ನುತ್ತಾರೆ ಹೇಮಂತ್ ಜಾಧವ್. ಕನಸನ್ನು ನನಸಾಗಿಸುವ ದೇವತೆಯಷ್ಟೇ ಅಲ್ಲ, ಇಡೀ ನಗರವನ್ನು ದೇವಿ ರಕ್ಷಿಸುತ್ತಾಳೆ ಎಂದೇ ಸ್ಥಳೀಯರು ನಂಬಿದ್ದಾರೆ.

‘ಮುಂಬೈಗೆ ಬರುವ ಯಾರೂ ಯಶಸ್ವಿಯಾಗದೇ ಇರಲಾರರು. ಅವಳು ಬೇಡಿದ್ದನ್ನು ನೀಡುವ ದೇವತೆ. ಏಳು ವರ್ಷಗಳ ಹಿಂದೆ ನಾನು ಘೋರ ಅಪಘಾತಕ್ಕೆ ಈಡಾದೆ. ದೊಡ್ಡ ಶಸ್ತ್ರಚಿಕಿತ್ಸೆಗೆ ಒಳಗಾದೆ. ನನ್ನ ಕುಟುಂಬದವರು ಮುಂಬಾದೇವಿಯನ್ನು ಬೇಡಿಕೊಂಡರು. ಈಗ ವೈದ್ಯರು ಹೇಳುವಂತೆ ನಾನು ಫಿಟ್ ಆಗಿದ್ದೇನೆ. ಪ್ರಾರ್ಥನೆ ಈಡೇರಿದ ನಂತರ ಯಾವ ಔಷಧವನ್ನೂ ತೆಗೆದುಕೊಳ್ಳುವ ಪ್ರಮೇಯವೇ ಬಂದಿಲ್ಲ’ ಎಂದು ದೇವಸ್ಥಾನದ ಆವರಣದಲ್ಲಿ ಕಚೇರಿಯುಳ್ಳ ಉಮೇಶ್ ಬಾಜಪೇಯಿ ಹೆಮ್ಮೆಯಿಂದ ಪ್ರತಿಕ್ರಿಯಿಸಿದರು.


ಮುಂಬಾದೇವಿ ದರ್ಶನಕ್ಕೆ ಸರದಿ ಸಾಲಿನಲ್ಲಿ ನಿಂತ ಭಕ್ತರು

ಮುಂಬೈ, ನೀರಿನಿಂದ ಸುತ್ತುವರಿದ ಸಣ್ಣ ನಗರವಾಗಿದ್ದಾಗ ಬೆಸ್ತರು ಈ ದೇವತೆಯನ್ನು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದರು. ಅವರ ಅಧಿದೇವತೆ ಇವಳು. 500 ವರ್ಷಗಳ ಹಿಂದೆ ವಿಕ್ಟೋರಿಯಾ ಟರ್ಮಿನಸ್ ಸ್ಟೇಷನ್ ತಲೆಎತ್ತಿದ ಸ್ಥಳವಾದ ಬೋರಿಬಂದರ್‌ನಲ್ಲೇ ಇವಳನ್ನು ಮೊದಲಿಗೆ ಪ್ರತಿಷ್ಠಾಪಿಸಲಾಯಿತು ಎನ್ನುವುದು ಪ್ರತೀತಿ. ಘಾಸಿ ತಲಾವೊ ಬಳಿಯ ಕೋಟೆ ಮೈದಾನದಲ್ಲಿ ದೇವಸ್ಥಾನವಿತ್ತು. ಅದನ್ನು ಬ್ರಿಟಿಷರು ಪರೇಡ್ ಮಾಡಲೆಂದು ವಶಪಡಿಸಿಕೊಂಡಾಗ ಅಲ್ಲಿದ್ದ ಎಲ್ಲ ಶಿಲ್ಪ–ಮೂರ್ತಿಗಳನ್ನು ತೆರವುಗೊಳಿಸಿದರು. ಮೆಟ್ರೊ ಸಿನಿಮಾ ಬಳಿಯ ಧೋಬಿತಲಾವೊಗೆ ದೇವಸ್ಥಾನ ಸ್ಥಳಾಂತರಗೊಂಡಿತು.

ಪದೇ ಪದೇ ಸ್ಥಳಾಂತರಗೊಂಡಿದ್ದರಿಂದ ದೇವಸ್ಥಾನದ ಮಾಲೀಕತ್ವ ಬೆಸ್ತರಿಂದ ದೂರವಾಯಿತು. ಅದರ ಮಾಲೀಕರೆಂದು ಹೇಳಿಕೊಳ್ಳುವವರೇ ಇರಲಿಲ್ಲ. ಆಗ ದೇಗುಲವನ್ನು ಈಗಿನ ಜವೇರಿ ಬಜಾರ್‌ಗೆ ಸ್ಥಳಾಂತರ ಮಾಡಲಾಯಿತು. ‘ಈ ರಚನೆಯು 200ರಿಂದ 250 ವರ್ಷಗಳಷ್ಟು ಹಳೆಯದು’ ಎನ್ನುತ್ತಾರೆ ಜಾಧವ್. ದೇವಸ್ಥಾನವನ್ನು ಇಲ್ಲಿ ನಿರ್ಮಿಸಬೇಕು ಎಂದು ತೀರ್ಮಾನಿಸಿದಾಗ ಪಾಂಡುಶೇಟ್ ಸೋನಾರ್ ಎಂಬ ವ್ಯಾಪಾರಿಗೆ ಅದರ ಹೊಣೆಗಾರಿಕೆ ವಹಿಸಲಾಯಿತು. ಆಗಿನ ಸರ್ಕಾರದ ಮೇಲೆ ಪ್ರಭಾವ ಬೀರುವಷ್ಟು ಸಾಮರ್ಥ್ಯ ಪಾಂಡುಶೇಟ್ ಅವರಿಗಿತ್ತು. ಅವರು ಹಾಗೂ ಅವರ ಕುಟುಂಬದವರು ದೇವಸ್ಥಾನ ನಿರ್ಮಾಣ ಕಾಮಗಾರಿಯ ಉಸ್ತುವಾರಿ ವಹಿಸಿದರು.

1952ರಲ್ಲಿ ಚಾರಿಟಿ ಕಮಿಷನರ್ ದೇವಸ್ಥಾನದ ಉಸ್ತುವಾರಿ ವಹಿಸಿಕೊಂಡರು. ಅದೇ ವರ್ಷ ಬಾಂಬೆ ಹೈಕೋರ್ಟ್ ಆದೇಶದ ಅನ್ವಯ ಟ್ರಸ್ಟ್ ಒಂದನ್ನು ನೋಂದಾಯಿಸಲಾಯಿತು. ಚಾರಿಟಿ ಕಮಿಷನರ್ ನೇತೃತ್ವದ ಆ ಟ್ರಸ್ಟ್ ಅಂದಿನಿಂದಲೂ ದೇವಸ್ಥಾನದ ಉಸ್ತುವಾರಿ ವಹಿಸಿಕೊಂಡಿದೆ.

ಪ್ರತಿದಿನ ಸರಾಸರಿ 10 ಸಾವಿರದಿಂದ 15 ಸಾವಿರ ಜನ ದೇವಸ್ಥಾನಕ್ಕೆ ಬರುತ್ತಾರೆ. ಹಬ್ಬಗಳು ಹಾಗೂ ರಜಾ ದಿನಗಳಲ್ಲಿ ಈ ಸಂಖ್ಯೆ 25 ಸಾವಿರಕ್ಕೆ ಏರುತ್ತದೆ. ಬರುವ ಆದಾಯವನ್ನು ದೇವಸ್ಥಾನದ ಆಡಳಿತ ನಿರ್ವಹಣೆ ಹಾಗೂ ಹಬ್ಬಗಳನ್ನು ಆಯೋಜಿಸಲು ಬಳಸಲಾಗುತ್ತದೆ. ‘ನಾವು ಸಾರ್ವಜನಿಕರ ಹಣವನ್ನು ನಿಭಾಯಿಸುತ್ತಿದ್ದೇವೆ. ಅಹಮದಾಬಾದ್‌ನಲ್ಲಿ ವೃದ್ಧಾಶ್ರಮವಿದೆ. ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತಿದ್ದೇವೆ. ಕಡು ಬಡವರಿಗೆ ಜಾತಿ, ಧರ್ಮವನ್ನು ಮೀರಿ ವೈದ್ಯಕೀಯ ಚಿಕಿತ್ಸೆಗೆ ಆರ್ಥಿಕ ಸಹಾಯ ಒದಗಿಸುತ್ತಿದ್ದೇವೆ. ಸಾಮಾಜಿಕ ಸೇವಾ ಕಾರ್ಯಗಳಲ್ಲಿ ನಿರತವಾಗಿರುವ ಸಂಸ್ಥೆಗಳಿಗೂ ನೆರವಿನ ಸಹಾಯಹಸ್ತ ಚಾಚುತ್ತಿದ್ದೇವೆ’ ಎನ್ನುತ್ತಾರೆ ಜಾಧವ್.

ದೇವಸ್ಥಾನವು ಬೆಳಿಗ್ಗೆ 6.30ರಿಂದ ರಾತ್ರಿ 10ರವರೆಗೆ ತೆರೆದಿರುತ್ತದೆ. ಎಲ್ಲ ದೇವಿಯರ ದೇವಸ್ಥಾನಗಳಂತೆ ಇಲ್ಲಿಯೂ ನವರಾತ್ರಿ ಆಚರಣೆ ಪ್ರಮುಖವಾದುದು. ಮುಂಬಾದೇವಿಯಲ್ಲಿ ವರ್ಷಕ್ಕೆ ನಾಲ್ಕು ನವರಾತ್ರಿ ಆಚರಣೆ ನಡೆಯುತ್ತವೆ. ಚೈತ್ರ ನವರಾತ್ರಿ, ಶರದ್ ಅಶ್ವಿನ್ ನವರಾತ್ರಿ ಅಲ್ಲದೆ ಮಾಘ ಹಾಗೂ ಆಷಾಢ ಮಾಸಗಳಲ್ಲಿ ಗುಪ್ತ ನವರಾತ್ರಿಗಳ ಆಚರಣೆ ನಡೆಯುತ್ತದೆ.

ಭಕ್ತರು ತಮ್ಮ ಸಂಪತ್ತು ಗಳಿಕೆ ಹಾಗೂ ಏಳಿಗೆಗೆ ಮುಂಬಾದೇವಿಯ ಕೃಪೆಯೇ ಕಾರಣ ಎಂದು ನಂಬಿದ್ದಾರೆ. ‘ಪ್ರಖ್ಯಾತ ಭಟ್ಲಾದೇವಿ ದೇವಸ್ಥಾನವು ದಹಿಸರ್‌ನಲ್ಲಿದೆ. ನನ್ನ ಮಾವ ಮೂರ್ತಿ ಪ್ರತಿಷ್ಠಾಪಿಸಿದ ದೇಗುಲ ಅದು. ಅವರ ಮರಣಾನಂತರ ಉಳಿದ ಟ್ರಸ್ಟಿಗಳು ಅದನ್ನು ಕೈವಶ ಮಾಡಿಕೊಂಡಿದ್ದೇ ಅಲ್ಲದೆ ನಮಗೆ ದೇವಸ್ಥಾನ ಪ್ರವೇಶಿಸಲೂ ಅವಕಾಶ ಕೊಡಲಿಲ್ಲ. ಇದು ನಮ್ಮನ್ನು ಘಾಸಿಗೊಳಿಸಿತು. ಮುಂಬಾದೇವಿ ದೇವಸ್ಥಾನಕ್ಕೆ ಹೋಗಿ ಪ್ರಾರ್ಥಿಸಿದೆ. ಮೊದಲ ಭೇಟಿಯ ನಂತರವೇ ಚಾರಿಟಿ ಕಮಿಷನರ್ ಮಧ್ಯ ಪ್ರವೇಶಿಸಿ ದೇವಸ್ಥಾನದ ವಿಷಯದಲ್ಲಿ ನಮಗಿದ್ದ ಹಕ್ಕನ್ನು ಪ್ರತಿಪಾದಿಸಿದರು. ನನ್ನ ಗಂಡನನ್ನು ಟ್ರಸ್ಟಿಗಳಲ್ಲಿ ಒಬ್ಬರನ್ನಾಗಿಸಿದರು. ನಾನು ನೋಡಿದ ಮೊದಲ ಪವಾಡವಿದು’ ಎಂದು ಸುಷ್ಮಾ ಬಾಡಕರ್ ಭಾವುಕರಾಗುತ್ತಾರೆ. ಕ್ಯಾನ್ಸರ್‌ನಿಂದ ಪಾರಾಗಿರುವ ಅವರು ಅದಕ್ಕೂ ದೇವಿಯ ಕೃಪೆಯೇ ಕಾರಣ ಎಂದು ನಂಬಿದ್ದಾರೆ. ‘ಚಿಕಿತ್ಸೆಯ ಪ್ರತಿ ಹಂತದಲ್ಲೂ ನಾನು ಪವಾಡವಾಗುವುದನ್ನು ಗಮನಿಸಿದ್ದೇನೆ. ವೈದ್ಯರೂ ಅದನ್ನು ನೋಡಿ ಚಕಿತರಾದದ್ದಿದೆ. ಸಹೋದರನೊಟ್ಟಿಗೆ ಮೊದಲ ಸಲ ಈ ದೇವಸ್ಥಾನಕ್ಕೆ ಬಂದೆ. ಆಮೇಲೆ ದೇವಿಯೇ ನನ್ನನ್ನು ಕಾಪಾಡಿದಳು’ ಎನ್ನುವಾಗ ಅವರಲ್ಲಿ ಕೃತಾರ್ಥ ಭಾವ.

ಹೆಸರಾಂತ ಕೈಗಾರಿಕೋದ್ಯಮಿಗಳು, ಸೆಲೆಬ್ರಿಟಿಗಳು ಪದೇ ಪದೇ ಈ ದೇವಸ್ಥಾನಕ್ಕೆ ಭೇಟಿ ನೀಡುತ್ತಾರೆ. ಮುಂಬಾದೇವಿಯ ಬಗೆಗಾಗಲೀ, ಅವಳ ಮೂರ್ತಿಯ ಕುರಿತಾಗಲೀ ತಿಳಿವಳಿಕೆ ಇದೆಯೋ ಇಲ್ಲವೋ, ಈ ದೇವಿ ನಗರಕ್ಕೆ ಕಾಲಿಡುವ ಎಲ್ಲರನ್ನೂ ರಕ್ಷಿಸುತ್ತಾಳೆ ಎಂಬ ದೃಢ ನಂಬಿಕೆಯಂತೂ ಇದೆ. ಉದ್ಯಮಿ ಅಂಬಾನಿಯಿಂದ ಹಿಡಿದು ಬಾಲಿವುಡ್ ತಾರೆಯರು, ಗಾಯಕ–ಗಾಯಕಿಯರವರೆಗೆ ಬೇಡಿ ಬಂದ ಎಲ್ಲರನ್ನೂ ದೇವಿ ಪೊರೆದಿದ್ದಾಳೆ, ರಕ್ಷಿಸಿ ಸಲಹಿದ್ದಾಳೆ.